ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ
ಸಿಸಿ ನಂಬರ. 680/2021

ಸಿ ಡಬ್ಲ್ಯೂ-2
ಪಿ ಡಬ್ಲ್ಯೂ-2

ದಿಃ 15-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನಭೋದಿಸಲಾಯಿತು.

ಸಾಕ್ಷಿಯ ಹೆಸರುಃ ಮಹಾಬಲೇಶ್ವರ ಗೌಡ
ತಂದೆಯ ಹೆಸರುಃ ಹನುಮಾ ಗೌಡ
ವಯಸ್ಸುಃ 60 ವರ್ಷ
ಉದ್ಯೋಗಃ ಕೂಲಿ ಕೆಲಸ
ವಿಳಾಸಃ ಬೆಳಸೆ

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ

ನನಗೆ ಚಾಸಾ-1 ಮತ್ತು 3 ರವರ ಪರಿಚಯ ಇರುತ್ತದೆ. ಆರೋಪಿತರ ಪರಿಚಯವಿರುವುದಿಲ್ಲ. ಅಂದಾಜು 4 ವರ್ಷಗಳ ಹಿಂದೆ ಪೊಲೀಸರ ಹೇಳಿಕೆಯ ಮೇರೆಗೆ ಬೆಳಸೆಯಲ್ಲಿ ಕಳುವಾದ ಮನೆಯಲ್ಲಿ ಸಹಿಯನ್ನು ಹಾಕಿರುತ್ತೇನೆ. ಸಾಕ್ಷಿಯು ನಿಪಿ-2 ರ ಮೇಲಿರುವ ತಮ್ಮ ಸಹಿಯನ್ನು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2ಬಿ ಎಂದು ಗುರುತಿಸಲಾಯಿತು. ಜಾಗದಲ್ಲಿ ಕಳುವಾಗಿರುತ್ತದೆ, ಸಹಿ ಹಾಕಲು ಹೇಳಿದ ಕಾರಣ ಸಹಿಯನ್ನು ಹಾಕಿರುತ್ತೇನೆ. ಕಳುವಾದ ಮನೆಯು ಚಾಸಾ-1 ರವರ ಮನೆಯಾಗಿರುತ್ತದೆ. ಸಾಕ್ಷಿಯು ಕಚ್ಚಾ ನಕಾಶೆಯ ಮೇಲಿರುವ ತಮ್ಮ ಸಹಿಯನ್ನು ಗುರುತಿಸಿದ್ದು, ಕಚ್ಚಾ ನಕಾಶೆಯನ್ನು ನಿಪಿ-15 ಮತ್ತು ಸಹಿಯನ್ನು ನಿಪಿ-15ಎ ಎಂದು ಗುರುತಿಸಲಾಯಿತು. ಚಾಸಾ-1 ರವರು ಮನೆಯಲ್ಲಿ

ನಿಪಿ–15 ರ ಮೇಲೆ ಸಹಿಯನ್ನು ಮಾಡಿರುತ್ತೇನೆ. ಮತ್ತೆ ಏನನ್ನೂ ಮಾಡಿರುವುದಿಲ್ಲ. ಸಾಕ್ಷಿಯು ನಿಪಿ–3 ರಿಂದ 5 ಫೋಟೋಗಳನ್ನು ಗುರುತಿಸುತ್ತಾರೆ. ಸದರಿ ಫೋಟೋಗಳನ್ನು ಚಾಸಾ–1 ರವರ ಮನೆಯ ಹತ್ತಿರ ತೆಗೆದಿರುತ್ತಾರೆ. ನಾನು ಸಹಿ ಮಾಡಿದ ದಾಖಲಾತಿಗಳ ಮೇಲೆ ಏನು ಬರೆದಿರುತ್ತದೆ ಎಂದು ಗೊತ್ತಿರುವುದಿಲ್ಲ. ಪಂಚನಾಮೆ ಬರೆಯಲು ಯಾರು ಮಾಹಿತಿ ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ, ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಸಂಜೆ ಸುಮಾರು 4 ಗಂಟೆಗೆ ಸಹಿಯನ್ನು ಹಾಕಿರಬಹುದು.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಇವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟಿ ಸವಾಲಿಗೆ ಅನುಮತಿ ಕೋರಿದ್ದು, ಅನುಮತಿಸಲಾಯಿತು.)

<u>ಪಾಟಿ ಸವಾಲುಃ</u> ಮಾನ್ಯ ಎ.ಪಿ.ಪಿ.ಯವರಿಂದ

2. ನೀವು ದಿಃ08–10–2020 ರಂದು ಸಹಿಯನ್ನು ಮಾಡಿರುತ್ತೀರಿ ಎಂದರೆ ನೆನಪಿರುವುದಿಲ್ಲ. ಪೊಲೀಸರು ಚಾಸಾ–1 ರವರ ಮನೆಯ ಹತ್ತಿರ ಚಾಸಾ–1 ರವರು ಮಾಹಿತಿ ಕೊಟ್ಟ ಪ್ರಕಾರ ಪಂಚನಾಮೆಯನ್ನು ಜರುಗಿಸಿರುತ್ತಾರೆ ಎಂದರೆ ಸಾಕ್ಷಿಯು ಅವರ ಕೋರಿಕೆಯ ಮೇರೆಗೆ ಸಹಿಯನ್ನು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಅದೇ ದಿನ ಕಚ್ಚಾ ನಕಾಶೆಯನ್ನು ಬಿಡಿಸಿ ತಮ್ಮ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಫೋಟೋಗಳನ್ನೂ ಸಹ ಪಂಚನಾಮೆಗೆ ಸಾಕ್ಷಿಯಾಗಿ ಅವರ ಮನೆಯ ಮುಂದೆ ನಿಲ್ಲಿಸಿ ತೆಗೆದಿರುತ್ತಾರೆ ಎಂದರೆ ಸರಿ. ಪಂಚನಾಮೆಯನ್ನು ಸಾಯಂಕಾಲ 7.15 ರಿಂದ ರಾತ್ರಿ 9.15 ಗಂಟೆಯವರೆಗೆ ಜರುಗಿಸಲಾಯಿತು ಎಂದರೆ ಸರಿ. ಪಂಚನಾಮೆಯಲ್ಲಿ ಬರೆದಿ ಎಲ್ಲ ವಿಷಯಗಳು ನಿಮಗೆ ಗೊತ್ತಿದ್ದರೂ ಸಹ ಗೊತ್ತಿರುವುದಿಲ್ಲ ಎಂದು

ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನಿಮದೇ ತಾಲೂಕಿನವರು ಆಗಿದ್ದರಿಂದ ಅವರಿಗೆ ಸಹಾಯ ಮಾಡಲೆಂದು ಪೊಲೀಸರ ಕೋರಿಕೆಯ ಮೇರೆಗೆ ಸಹಿ ಹಾಕಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> ಆರೋಪಿತರ ಪರ ವಕೀಲರಾದ ಶ್ರೀ ವಿ.ಎಸ್.ಎನ್. ಇವರಿಂದಃ

3. ಚಾಸಾ–1 ರವರು ಮನೆಯ ನಂಬರ ಗೊತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಅವರ ಮನೆ ಜಾಗದ ಸರ್ವೆ ನಂಬರ ಗೊತ್ತಿದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ಸಹಿ ಮಾಡಿದ ಜಾಗದ ಚೆಕ್ಬಂದಿ ಹೇಳಲು ಬರುತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಯಾವ ಕಾರಣಕ್ಕಾಗಿ ಸಹಿ ಪಡೆದುಕೊಂಡಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಬಾವಿ ನೀರು ತರಲು ಹೋದಾಗ ಸಹಿಯನ್ನು ಕೊಡಲು ಹೇಳಿದ್ದು, ಅದರ ಪ್ರಕಾರ ಸಹಿಯನ್ನು ಕೊಟ್ಟಿರುತ್ತೇನೆ. ಸಹಿ ಹಾಕಿದ ದಾಖಲೆಯ ಮೇಲೆ ಏನು ಬರೆಯಲಾಗಿದೆ ಎಂದು ನಿಮಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಪೊಟೋಗಳನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ವೈಯಕ್ತಿಕವಾಗಿ ಮಾಹಿತಿ ಇರುವುದಿಲ್ಲ. ಯಾವುದರ ಮುಖಾಂತರ ಪೊಟೋ ತೆಗೆದಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಪೊಟೋ ತೆಗೆದ ಜಾಗದ ಚೆಕ್ಬಂದಿ ಹೇಳಲು ಬರುವುದಿಲ್ಲ.

<u>ಮರುವಿಚಾರಣೆ:</u> ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಜೆ.ಎಂ.ಎಫ್.ಸಿ., ಅಂಕೋಲಾ.